# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190, ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರವರ ತಿದ್ದುಪಡಿ ಆದೇಶ ಸಂಖ್ಯೆ: ಬಿ12(5)/ಪಿ.ಆರ್/35/2020-21 ದಿ: 02.10.2020ರ ಆದೇಶದಂತೆ ದಿನಾಂಕ: 09.11.2020 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಂಖ್ಯೆ 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಟಿ. ಹನುಮಂತರಾಯ | ಅಧ್ಯಕರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀಮತಿ ಲಕ್ಷ್ಮೀ ಬಿ | ಸಹ ಕಂದಾಯ ಅಧಿಕಾರಿ |
| 4 | ಶ್ರೀ ಸಾಯಿಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಶ್ರೀ ಡಿ. ವಿಜಯಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ |
| | ಶ್ರೀ ಸಂತೋಷ್ ಪ್ರಸಾದ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ |
| 6 | ಶ್ರೀ ಹೊನ್ನೂರು ಪಾಷ | ಕಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 8 | ಶ್ರೀ ಚಂದ್ರ ರೆಡ್ಡಿ | ಸದಸ್ಯರು |
| 9 | ಶ್ರೀ ಬಿ.ಎ. ಶ್ರೀಕಾಂತ | ಸದಸ್ಯರು |
| 10 | ಶ್ರೀ ಬಿ ಶೇಖರ | ಸದಸ್ಯರು |
| 11 | ಶ್ರೀ ಉಮೇಶ್ | ಸದಸ್ಯರು |
| 12 | ಶ್ರೀ ಗೋಪಿನಾಥ | ಸದಸ್ಯರು |
| 13 | ಶ್ರೀ ಶಂಕರ ಆರ್.ಎನ್ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು, ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

ಹಿಂದಿನ ಸಭಾ ನಡುವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಘನತ್ಯಾಜ್ಯ ನಿರ್ವಹಣೆ ಮತ್ತು ಕೋವಿಡ್-19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿ ರವರು ತಿಳಿಸಿದರು.

Scanned with Car

| ಕ್ರ ಸಂ | ವಿಷಯ | ತೀರ್ಮಾನ |
|---|---|---|
| 1 | **ಬಿ.ಬಿ.ಎಂ.ಪಿ (ವಿದ್ಯುತ್)** | ಹಿಂದಿನ ಸಭೆಯಲ್ಲಿ ಸ್ಥಳ ಪರಿವೀಕ್ಷಣೆ ಮಾಡಿ ನಾಗರೀಕರ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಿದ್ದು, ಈ ಬಗ್ಗೆ ಸಂಬಂಧಪಟ್ಟ ಅಭಿಯಂತರರಿಗೆ ವಾರ್ಡ್ ಸಮಿತಿಗೆ ಆಹ್ವಾನೆ ನೀಡಿದ್ದರೂ, ದಿನಾಂಕ: 17.10.2020 ಮತ್ತು 09.11.2020ರ ರಂದು ನಡೆದ ಸಭೆಗೆ ಗೈರ್ ಹಾಜರಾಗಿರುತ್ತಾರೆ. |
| 2 | **ಆರೋಗ್ಯ ಇಲಾಖೆ** | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಕ್ರಮಕೈಗೊಂಡಿರುವ ವರದಿ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿತ್ತು. ಆದರೆ ಹಿರಿಯ ಆರೋಗ್ಯ ಪರಿವೀಕ್ಷಕರು ಗೈರು ಹಾಜರಾಗಿರುತ್ತಾರೆ. ಮುಂದುವರೆದಂತೆ ಸಭೆಯಲ್ಲಿ ಉಪಸ್ಥಿತ ಇದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಕೆ.ಸಿ.ಡಿ.ಸಿ ಇದ್ದು, ಇದರಿಂದ ದುರವಾಸನೆ ಬೀರುತ್ತಿದ್ದು ಔಷದಿ ಸಿಂಪಡಿಸಲು, ಸೊಳ್ಳೆ ಔಷದಿ, ಸಾಂಕ್ರಾಮಿಕ ರೋಗ್ಯದ ಹಿನ್ನಲೆಯಲ್ಲಿ ಔಷದಿ ಸಿಂಪಡಣೆ ಮಾಡುವಂತೆ ಸೂಚಿದ್ದು, ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ದೈನಂ ದಿನ ಕಸದ ಆಟೋಗಳನ್ನು ಮನೆ-ಮನೆ ಸಂಚರಿ ವಾರ್ಡ್ ವ್ಯಾಪ್ತಿಯಲ್ಲಿ ಉತ್ತಮ್ಮವಾದ ರೀತಿಯಲ್ಲಿ ಕಸದ ಕಾರ್ಯ ನಡೆಯುತ್ತಿದ್ದೆ, ಕಿರಿಯ ಆರೋಗ್ಯ ಪರಿವೀಕ್ಷಕರು, ತಿಳಿಸಿರುತ್ತಾರೆ. ಮುಂದುವರೆದಂತೆ, ಅನಧಿಕೃತವಾಗಿ ಗುಜರಿ ಅಂಗಡಿಗಳನ್ನು ಹೆಚ್ಚಾಗಿದ್ದು, ತೆರವುಗೊಳಿಸುವಂತೆ ಸಭೆಯಲ್ಲಿದ್ದ, ಐ.ಟಿ.ಐ ಬಡಾವಣೆಯ ನಿವಾಸಿಗಳು ಪತ್ರವನ್ನು ನೀಡುತ್ತಾರೆ. ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲುವಂತೆ ಸೂಚಿಸಿರುತ್ತಾರೆ. **ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು,** |
| 3 | **ಬಿ.ಡಬ್ಲ್ಯೂ.ಎಸ್.ಎಸ್.ಬಿ** | ಶ್ರೀ ಉಮೇಶ್ ಸದಸ್ಯರು ಸಭೆಯಲ್ಲಿ, ವಾರ್ಡ್ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರಿನ ಮೀಟರ್‌ನ್ನು ಅಳವಡಿಸದೆ ಅಧಿಕೃತವಾಗಿ ನೀರುನ್ನು ಉಪಯೋಗಸುತ್ತಿದ್ದಾರೆ ಅಂತವರನ್ನು ಪತ್ತೆ ಹಚ್ಚುವುದು ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಗುಣಮಟ್ಟದ ನೀರನ್ನು ಒಗಿಸುತ್ತಿಲ್ಲ ಕ್ರಮ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಿರುತ್ತಾರೆ. ಸಹಾಯಕ ಅಭಿಯಂತರರು, ಈಗಾಗಲೇ ಸುಮಾರು ಕಟ್ಟಡದ ಮಾಲೀಕರುಗಳಿಗೆ ನೋಟಿಸ್ ಜಾರಿ ಮಾಡಿ ದಂಢ ವಿಧಿಸಿಸಲಾಗಿದೆ ಶುದ್ಧ ಕುಡಿಯುವ ನೀರಿನ ಘಟಕದ ಗುಣಮಟ್ಟವನ್ನು ಪರೀಕ್ಷಿಸಲು ಕ್ರಮ ವಹಿಸಲಾಗುವುದೆಂದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ. ಅಧ್ಯಕ್ಷರು ಇನ್ನು ಉತ್ತಮ್ಮವಾದ ರೀತಿಯಲ್ಲಿ ಕಾರ್ಯವನ್ನು ಮಾಡುವಂತೆ ಸೂಚಿಸಿರುತ್ತಾರೆ. |
| 4 | **ಕಂದಾಯ ವಿಭಾಗ** | ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರಿ ಗೋಮಾಳದ ಜಾಗಗಳು ನಿರಂತರವಾಗಿ ಒತ್ತುವರಿ ಮಾಡಿಕೊಳ್ಳುತ್ತಿದ್ದು, ಇದರ ಬಗ್ಗೆ ಅನೇಕ ಬಾರಿ ಮುಖ್ಯ ಮಂತ್ರಿಗಳ ಕಛೇರಿಗೂ ಸಹ ದೂರುಗಳನ್ನು ನೀಡಲಾಗಿದೆ ಯಾವುದೇ ಪ್ರಯೋಜನವಾಗಿಲ್ಲ ಆದ್ದರಿಂದ ಸಭೆಯಲ್ಲಿ |

Scanned with Car

| | | |
|---|---|---|
| | | ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಗಳಿಗೆ ಸದಸ್ಯರುಗಳು ಕೂಡಲೇ ಕ್ರಮವಹಿಸುವಂತೆ ಮನವಿ ಸಲ್ಲಿಸರುತ್ತಾರೆ.<br>**ಕ್ರಮ:- ಸಹಯಕ ಕಂದಾಯ ಅಧಿಕಾರಿಗಳು** |
| 5 | **ಕಾಮಗಾರಿ ವಿಭಾಗ** | ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿಯಾಗಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕ್ಷರಿಗೆ ಸದಸ್ಯರಾದ ಶ್ರೀ ಸುರೇಶ್ ರೆಡ್ಡಿಯರು ಮನವಿಯನ್ನು ಸಲ್ಲಿಸಿರುತ್ತಾರೆ. ಇದರ ಬಗ್ಗೆ ಕ್ರಮ ವಹಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಿದ್ದು, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಈಗಾಗಲೇ ನೋಟಿಸ್ ಜಾರಿ ಮಾಡಿದ್ದು ಹಾಗೂ ರಸ್ತೆ ದೃಢೀಕರಣ ಬಗ್ಗೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಿರುತ್ತಾರೆ (ಸದರಿ ಸ್ಥಳದ ಪರಿವೀಕ್ಷಣೆಯನ್ನು ಮಾನ್ಯ ಅಧ್ಯಕ್ಷರು ಸಮ್ಮುಖದಲ್ಲಿ ಪರಿಶೀಲಿಸಲು ದಿನಾಂಕ: 11.11.2020 ರಂದು ಕಾರ್ಯ ಹಮ್ಮಿಕೊಳ್ಳಲಾಗಿದೆ) ವಾರ್ಡ್ ವ್ಯಾಪ್ತಿಗಳಲ್ಲಿ ಬರುವ ರುದ್ರ ಭೂಮಿಗಳನ್ನು ಅಭಿವೃದ್ಧಿ ಪಡಿಸಿ, ಮೂಲ ಭೂತ ಸೌಕರ್ಯ ಒದಗಿಸಬೇಕೆಂದು ಸದಸ್ಯರುಗಳು ಅಧ್ಯಕ್ಷರ ಗಮನಕ್ಕೆ ತಂದಿರುತ್ತಾರೆ.<br>**ಕ್ರಮ:- ಸಹಾಯಕ ಅಭಿಯಂತರರು** |
| 6 | **ಬೆಸ್ಕಂ ಇಲಾಖೆ** | ವಾರ್ಡ್ ವ್ಯಾಪ್ತಿಯಲ್ಲಿ ಹಾಲಿರುವ ವಿದ್ಯುತ್ ಸಂಪರ್ಕಗಳ ವೈರ್‌ಗಳನ್ನು ಕೈಗಳಿಗೆ ಎಟುಕುವ ರೀತಿಯಲ್ಲಿ ಇದ್ದು, ಮೊದನೆ ಮಹಡಿ, ಎರಡೇ ಮಹಡಿ ಕಟ್ಟಡಗಳ ಮುಂಭಾಗ ತುಂಬ ಅಪಾಯಕರವಾಗದ ರೀತಿಯಲ್ಲಿದ್ದು ಕೂಡಲೇ ಕ್ರಮ ವಹಿಸವಂತೆ ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ. ಅಧ್ಯಕ್ಷರು ಸಹಾಯಕ ಅಭಿಯಂತರರು, ಬೆಸ್ಕಂ ರವರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ಬೆಸ್ಕಂ.** |
| 7 | **ಪಶು ಸಂಗೋಪನೆ** | ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ಅಂಡಿಗಳ ಸರ್ವೆ ಮಾಡಿ, ಅನಧಿಕೃತ ಅಂಗಡಿಗಳನ್ನು ಮುಚ್ಚಲು ಕ್ರಮ ವಹಿಸುಂತೆ ಸೂಚಿಸಿರುತ್ತಾರೆ. ಕ್ರಮ: **ಸಹಾಯಕ ನಿರ್ದೇಶಕರು (ಪಶು ಸಂಗೋಪನೆ)** |
| 8 | **ತೋಟಗಾರಿಕೆ ಇಲಾಖೆ.** | ವಾರ್ಡ್ ನಂ. 190ರ ಐ.ಟಿ.ಐ ಕುವೆಂಪು ಉದ್ಯಾನವನದ ಸುತ್ತಮುತ್ತಲ್ಲಿ ತುಂಬಾ ಹುಲ್ಲು ಬೆಳೆದ್ದಿದ್ದು, ಕೂಡಲೇ ಕತ್ತಿರಿಸುವಂತೆ ಸದಸ್ಯರು ಕೋರಿರುತ್ತಾರೆ. ಅಧ್ಯಕ್ಷರು ತೋಟಗಾರಿಕೆ ಅಧೀಕ್ಷಕರಿಗೆ ದೂರವಾಣಿ ಕರೆ ಮಾಡಿ ಸಭೆಗೆ ಗೈರು ಹಾಜರಿಯಾಗಿರುವ ಬಗ್ಗೆ ವಿಚಾರಿಸಿದಾಗ ಕೆಲಸಗಳ ನಿಮಿತ್ಯ ಕೇಂದ್ರ ಕಛೇರಿಗೆ ಬಂದಿದ್ದು, ಸಭೆಗೆ ಹಾಜರಾಗಲು ಸಾದ್ಯವಾಗಿರುವುದಿಲ್ಲ ಮತ್ತು ಸಮಸ್ಯೆ ಬಗ್ಗೆ ತಿಳಿಸಿದಾಗ ಆದಷ್ಟು ಬೇಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. |

Scanned with Car

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 190

ಪ್ರತಿಯನ್ನು:-

1. ವಿಶೇಷ್ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
3. ವಾರ್ಡ್ ಸಮಿತಿಯ ಅಧ್ಯಕ್ಷಕರ ಮಾಹಿತಿಗಾಗಿ ಸಲ್ಲಿಸಿದೆ.
4. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

Scanned with Car